Prof. M.D. NANJUNDASWAMY : I am the youngest member of this house.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಸದನಕ್ಕೆ ಹೊಸಬರಾದರೂ ಬಹಳ ಹಿರಿಯರಿದ್ದೀರಿ. ಜ್ಞಾನವೃದ್ಧರಾಗಿದ್ದೀರಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಸನ್ಮಾನ್ಯ ಸಚಿವರೇ, ಒಂದು ನಿಮಿಷ ಈಲ್ಡ್ ಆಗಬೇಕು ತಾವು.

ಶ್ರೀ ಎಂ. ವೀರಪ್ಪ ಮೊಯಿಲಿ :– ನಾನು ಹೇಳಿಬಿಡುತ್ತೇನೆ. ಕಾಲಿಂಗ್ ಅಟೆನ್‌ಷನ್‌ನಲ್ಲಿ ನಾವು ಹಾಕಿದಂಥ ನಿಯಮಗಳನ್ನು ನಾವೇ ಮುರಿಯತಕ್ಕ ಪ್ರಯತ್ನ ಸರಿಯಲ್ಲ. ಗಮನ ಸೆಳೆಯುವ ಸೂಚನೆಯಲ್ಲಿ ಅವರನ್ನು ಕರೆದರೆ ಮತ್ತೊಬ್ಬರು ನಾಳೆ ಏಳುತ್ತಾರೆ. ಸಚಿವರು ಉತ್ತರ ಕೊಡುವಾಗ ಒಂದು ಮಾತು ಹೇಳಲೇಬೇಕು ಎಂದು ಹಠ ಹಿಡಿದರೆ ಎಲ್ಲರೂ ಹಠ ಹಿಡಿಯುತ್ತಾರೆ.

ಉಪಾಧ್ಯಕ್ಷರು :– ಶ್ರೀಯುತ ಕೆ.ಎಚ್. ಹನುಮೇಗೌಡರೆ, ತಾವು ಗಮನ ಸೆಳೆಯಿರಿ.

ಪ್ರೊ. ಎಂ.ಡಿ. ನುಂಜುಂಡಸ್ವಾಮಿ ಸನ್ಮಾನ್ಯ ಹನುಮೇಗೌಡರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು :– ಮಾನ್ಯ ಆರೋಗ್ಯ ಸಚಿವರು.

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ :– ಆರೋಗ್ಯ ಸಚಿವರೇ, ದಯವಿಟ್ಟು ಕೇಳಿ. ಬಹಳ ಮುಖ್ಯವಾದ ವಿಚಾರ ಇದು. ಆದ್ದರಿಂದ ಮಾತನಾಡುತ್ತಿದ್ದೇನೆ. ಇಲ್ಲದಿದ್ದರೆ ಮಾತನಾಡುತ್ತಾ ಇರಲಿಲ್ಲ.

ಉಪಾಧ್ಯಕ್ಷರು :– ಬೇರೆ ಅವಕಾಶ ಇರುತ್ತದೆ. ಆಗ ತಾವು ಮಾತನಾಡಬಹುದು. ದಯವಿಟ್ಟು ಹಠ ಮಾಡಬಾರದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಮೂರು ದಿವಸದಿಂದ ಎಲ್ಲರ ಮಾತು ಕೇಳುತ್ತಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಮಾನ್ಯ ಆರೋಗ್ಯ ಸಚಿವೆಯರು):– ನಿಯಮ 334ರಲ್ಲಿ ವಿಚಾರ ಬಂದಾಗ ಮಾತನಾಡಿ ತಾವು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– 334 ಅಲ್ಲ. ಮನುಷ್ಯನ ಪ್ರಾಣ ಹೋಗುತ್ತಿದೆ.

ಉಪಾಧ್ಯಕ್ಷರು : ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ದಯವಿಟ್ಟು ಸಹಕರಿಸಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅವರು ಗುಂಡ್ಲುಪೇಟೆ ತಾಲ್ಲೂಕಿನಿಂದ ಬರುವವರು. ಆನೆಯನ್ನು ದಿವಸ ನೋಡುವವರು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :– ಏನು ಮಾಡಬೇಕು ನಾನು?

Prof. M.D. NANJUNDASWAMY :- Why I am insisting on this because I know the way the forest officers are behaving.

MADAM DEPUTY SPEAKER :- You have many other ways of bringing it. ತಾವು ಹೇಳುವುದು ರೆಕಾರ್ಡ್‌ಗೆ ಹೋಗುವುದಿಲ್ಲ.

* * *

2. ಹಾಸನ ಜಿಲ್ಲಾ ಆಸ್ಪತ್ರೆಯ ಕಟ್ಟಡದ ದುರಸ್ತಿ ಬಗ್ಗೆ

ಶ್ರೀ ಕೆ.ಹೆಚ್. ಹನುಮೇಗೌಡ :– ಮಾನ್ಯ ಉಪಾಧ್ಯಕ್ಷರೇ, ಹಾಸನ ಜಿಲ್ಲಾ ಆಸ್ಪತ್ರೆಯ ಕಟ್ಟಡದ ದುರಸ್ತಿ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

(* ಮಾನ್ಯ ಉಪಾಧ್ಯಕ್ಷರ ಆಜ್ಞೆಯಂತೆ ಅದನ್ನು ದಾಖಲಿಸಲಿಲ್ಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು) : ಮಾನ್ಯ ಉಪಾಧ್ಯಕ್ಷರೇ, ಹಾಸನದ ಜಿಲ್ಲಾ ಆಸ್ಪತ್ರೆಯ ಕಟ್ಟಡವು ಹಳೆಯದಾಗಿರುವುದರಿಂದ ಕೆಲವು ವಿಭಾಗದ ಗೋಡೆಗಳಲ್ಲಿ ಬಿರುಕು ಕಾಣಿಸಿಕೊಂಡಿರುವುದು ಹಾಗೂ ಮಳೆಗಾಲದಲ್ಲಿ ಮೇಲ್ಚಾವಣಿ ಸೋರುತ್ತಿರುವುದು ಅಲ್ಲದೆ ನೆಲದ ಗಾರೆಯು ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಮೇಲ್ಕಂಡ ದುರಸ್ತಿಯ ಬಗ್ಗೆ ಸುಮಾರು 10 ಲಕ್ಷ ರೂ. ಅಂದಾಜು ಮಾಡಲಾಗಿದ್ದು, ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಿಂದ, ಪಡೆದು ದುರಸ್ತಿ ಪೂರ್ಣಗೊಳಿಸಲು ಸೂಕ್ತ ವ್ಯವಸ್ಥೆ ಮಾಡಲಾಗುವುದು.

ಶ್ರೀ ಕೆ.ಹೆಚ್. ಹನುಮೇಗೌಡ :– ಅಲ್ಲಿ ಮಳೆಯಿಂದಾಗಿ ಕಟ್ಟಡ ಬಿರುಕುಬಿಟ್ಟಿದೆ ಎಂದು ಮಾನ್ಯ ಸಚಿವರೇ ಒಪ್ಪಿಕೊಂಡಿದ್ದಾರೆ. ಅಲ್ಲಿ ...

PROF. M.D. NANJUNDASWAMY :- Please allow me to become Hanume Gowda. I want to talk about a person who was killed by an elephant in Mudigere taluk. I was there last week end and met the five daughters of Mote Gowda who was trampled to death by an elephant. ಶಿವಮೊಗ್ಗದ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಬರುತ್ತಾನಂತೆ. ಅಲ್ಲಿ 7 ಆನೆಗಳು ಓಡಾಡುತ್ತಿವೆ. ಅದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಜನರು ಹೇಳಿದರೆ ಅವನ ಹಾರಿಕೆ ಉತ್ತರ ಕೊಡುತ್ತಾನಂತೆ, ಏನು ಕೊಡುತ್ತಾನೆ? ಐದು ಸಾವಿರ ರೂಪಾಯಿ ಪರಿಹಾರ ಕೊಡುತ್ತೇವಲ್ಲ, ಆನೆಯನ್ನು ಏಕೆ ಗುಂಡುಹಾಕಿ ಕೊಲ್ಲಬೇಕು? ಏನು ಕ್ರಮ ತೆಗೆದುಕೊಳ್ಳುತ್ತೀರಿ? ನಾನು ರೈತರಿಗೆ ಹೇಳಿ ಬಂದಿದ್ದೇನೆ, 5 ಸಾವಿರ ರೂಪಾಯಿ ಕಲೆಕ್ಟ್ ಮಾಡಿ ಇಟ್ಟುಕೊಳ್ಳಿ ಎಂದು, ಏಕೆ ಗೊತ್ತೇ? ಕನ್‌ಸರ್ವೇಟರ್ ಕುಟುಂಬ ವರ್ಗದವರಿಗೆ ಕೊಡುವುದಕ್ಕೆ. 5 ಜನ ಹೆಣ್ಣುಮಕ್ಕಳು ನನ್ನ ಹತ್ತಿರ ಬಂದಿದ್ದರು. ನೀವು ಕೊಡುವ ಪರಿಹಾರ 5 ಸಾವಿರ ರೂಪಾಯಿಗಳು. ಸಮಾಜವಾದೀ ಮುಖ್ಯಮಂತ್ರಿಗಳು ಬಂದಿದ್ದಾರೆಂದು ನಾನು ಈ ಮಾತನಾಡುತ್ತಿದ್ದೇನೆ. ಏರೋಪ್ಲೇನಿನಿಂದ ಬಿದ್ದರೆ 5 ಲಕ್ಷ, ಕೋಮುವಾರು ಗಲಭೆಯಿಂದ ಸತ್ತರೆ 1 ಲಕ್ಷ, 2 ಎಕರೆಯ ರೈತ, ಮೋಟೇಗೌಡ, ಮೂಡಿಗೆರೆ ತಾಲ್ಲೂಕಿನವನು ಸತ್ತರೆ 5 ಸಾವಿರ ರೂಪಾಯಿಗಳು. ಮೊದಲು ಈ ಪರಿಹಾರ ನೀತಿಯನ್ನು ಬದಲಾವಣೆ ಮಾಡಿ. ಅದರ ಜೊತೆಗೆ ನಿಮ್ಮ ಕನ್‌ಸರ್ವೇಟರ್ ಯಾರು ಇದ್ದಾರೆ ಅವರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳದೇ ಇದ್ದರೆ ನಾವು ನೇರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನಮ್ಮ ಕಾರ್ಯಕರ್ತರು ಕೇಳುತ್ತಾರೆ ಅಲ್ಲಿ. ನಿಮಗೆ ಆನೆಗಳನ್ನು ಸಾಯಿಸುವುದಕ್ಕೆ ಹುಕ್ಕುಮ್ ಇಲ್ಲ ಅಂತಂದ್ರೆ ಅಥವಾ ನಿಮಗೆ ಧೈರ್ಯ ಇಲ್ಲ ಎಂದರೆ ಬನ್ನಿ, ನಮ್ಮ ಹತ್ತಿರ ಕೋವಿ ಇದೆ, ಮಲೆನಾಡಿನ ಹುಡುಗರು ನಾವು, ನೀವು ಹಿಂದೆ ಬನ್ನಿ ನಾವೇ ಮುಂದೆ ಹೋಗುತ್ತೇವೆ ಆನೆಗಳನ್ನು ವಿಚಾರಿಸಿಕೊಳ್ಳುತ್ತೇವೆ ಎಂದು. ಏನು ಮಾಡುತ್ತೀರೆಂದು ಹೇಳಿ ಅರಣ್ಯ ಮಂತ್ರಿಗಳೇ?

ಶ್ರೀ ಇ.ಟಿ. ಶಂಭುನಾಥ್ :– ಕಾಡು ಪ್ರಾಣಿಗಳನ್ನು ಸಂರಕ್ಷಿಸುವುದು ನಮ್ಮ ಸರ್ಕಾರದ ನೀತಿಯೇ ಹೊರತು ಅವನ್ನು ಕೊಲ್ಲುವುದಲ್ಲ. ಆದಕ್ಕಾಗಿ ಆನೆಗಳನ್ನು ಓಡಿಸುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ತಾವು ಹೇಳಿದ ಕನ್‌ಸರ್ವೇಟರ್ ದುರ್ವರ್ತನೆ ಮಾಡಿದ್ದರೆ ಅವರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಪರಿಹಾರವನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಮತ್ತೆ ಈ ಸತ್ತಿಗನಹಳ್ಳಿ ಎಂದು ಬರೆದುಕೊಳ್ಳಿ. ದಯವಿಟ್ಟು ಆ ಗ್ರಾಮದ ಸುತ್ತ 10 ಗ್ರಾಮಗಳಲ್ಲಿ ಈ ಆನೆಗಳು ಗುಂಪಾಗಿ ಇವತ್ತೂ ಕೂಡಾ ಓಡಾಡುತ್ತಿವೆ.

ಶ್ರೀ ಇ.ಟಿ. ಶಂಭುನಾಥ್ :– ಬರ್ಕೊಂಡಿದ್ದೀನಿ ಸಾರ್ (ನಗು)

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಈ ಮೋಟೇಗೌಡ ಎನ್ನುವವನು 7ನೇ ಮನುಷ್ಯ ಸತ್ತಿರುವುದು. ಮಿಕ್ಕಿದ್ದನ್ನು ಆಮೇಲೆ ಹೇಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :– ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿ ಮಳೆಯಿಂದಾಗಿ ಕಟ್ಟಡ ಬಿರುಕುಬಿಟ್ಟಿದೆಯೆಂದು ಸಚಿವರೇ ಒಪ್ಪಿಕೊಂಡಿದ್ದಾರೆ. ಅಲ್ಲಿ ಈ ವರ್ಷ ಕೂಡ ಜಾಸ್ತಿ ಮಳೆಯಾಗಿದ್ದರೆ ಅನಾಹುತ ಜಾಸ್ತಿ ಆಗುತ್ತಿತ್ತು. ಅಲ್ಲಿ 300–400 ಬಡ ರೋಗಿಗಳು ಇದ್ದಾರೆ. ನಾನು ಒಬ್ಬ ರೋಗಿಯನ್ನು ನೋಡಲು ಹೋದಾಗ ಅಲ್ಲಿದ್ದವರೆಲ್ಲಾ ನನ್ನನ್ನು ಮುತ್ತಿಕೊಂಡು ಅವರ ಕಷ್ಟ ಹೇಳಿದರು. ಯಾವುದೋ ಖಾಯಿಲೆಗೆ ಬಂದು, ಮಳೆ ನೀರಿಂದ ಇನ್ನೊಂದು ಖಾಯಿಲೆಗೆ ತುತ್ತಾಗಬೇಕಾಗಿದೆ. ಅಲ್ಲಿ ಗೋಡೆ ಬಿರುಕುಬಿಟ್ಟಿದ್ದು ಜಾಸ್ತಿ ಮಳೆ ಬಂದು ಕಟ್ಟಡ ಬಿದ್ದರೆ ನಮ್ಮ ಗತಿ ಏನು. ನಮ್ಮ ಜೀವಕ್ಕೆ ರಕ್ಷಣೆ ಇಲ್ಲವೇ ಎಂದು ಕೇಳಿದರು; ಅವರೆಲ್ಲಾ ಕಡುಬಡವರು. ಮುಂದಿನ ವರ್ಷ ಮಳೆ ಪ್ರಾರಂಭವಾಗುವುದರೊಳಗೆ ರಿಪೇರಿ ಮಾಡಿಸಿ ತಾವು ಪುಣ್ಯ ಕಟ್ಟಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :– ಮಾನ್ಯ ಹನುಮೇಗೌಡರು ಯಾವ ವಿಚಾರವನ್ನು ಹೇಳಬೇಕೆಂದರೂ ಉದ್ರೇಕ ಜಾಸ್ತಿಯಾಗುತ್ತದೆ. ನಾನು ಈ ಬಗ್ಗೆ ಪುಟ್ಟಸ್ವಾಮಿಗೌಡರಿಗೆ ಕೇಳಿದೆ. ಅದಕ್ಕೆ ಅವರು ಸೋರುತ್ತಿರುವುದು ನಿಜ, ಹಳೆಯದಾಗಿರುವುದು ನಿಜ ಎಂದರು. ಆದರೆ ಹನುಮೇಗೌಡರು ಹೇಳುವಷ್ಟು ರೋಗಿಗಳ ಮೇಲೆ ಬಿದ್ದುಹೋಗುವ ಸ್ಥಿತಿಯಲ್ಲಿ ಆ ಕಟ್ಟಡ ಇಲ್ಲ ಎಂದರು. ಆದರೂ ಸಹ ಅದಷ್ಟು ಬೇಗ ಇದನ್ನು ರಿಪೇರಿ ಮಾಡಿಸಿಕೊಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ :– ಇರುವ ತೊಂದರೆಯನ್ನು ಹೇಳಬೇಕಾದ್ದು ನನ್ನ ಕರ್ತವ್ಯ. ಜಾಸ್ತಿ ಮಳೆಯಾದರೆ ಗೋಡೆ ಮೇಲೆ ಬೀಳುವುದಿಲ್ಲವೇ? ಈ ವರ್ಷ ಜಾಸ್ತಿ ಮಳೆಯಾಗದೇ ಏನೂ ಆಗಿಲ್ಲ. ಈ ಬೇಸಿಗೆಯಲ್ಲಿ ರಿಪೇರಿ ಮಾಡಿಸುತ್ತೀರಾ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :– ಮಾಡಿಸಿಕೊಡುತ್ತೇವೆ.

ನಿಯಮ 334ರ ಮೇರೆಗೆ

(1) ಅರಣ್ಯದಂಚಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂ ರಹಿತ ಬಡವರಿಗೆ ಪಟ್ಟಾ ದೊರಕಿಸಿಕೊಡುವ ಬಗ್ಗೆ.

ಶ್ರೀಮತಿ ಸುಮಾ ವಂಸತ್ (ವಿರಾಜಪೇಟೆ) :– ಮಾನ್ಯ ಉಪಾಧ್ಯಕ್ಷೆಣೀಯವರೆ, ಸ್ವಂತಕ್ಕೆ ಒಂದಿಂಚೂ ಭೂಮಿ ಇಲ್ಲದ ಬಡವರು ಲಕ್ಷಾಂತರ ಮಂದಿ ಅದರಲ್ಲಿಯೂ ಕರ್ನಾಟಕದಲ್ಲಿ ಆದಿವಾಸಿಗಳ ಮತ್ತು ಇತರ ಭೂರಹಿತ ಬಡವರ ಸ್ಥಿತಿ ಸೋಚನೀಯ. ಭೂಮಿಯಿಲ್ಲದ ಇಂಥ ಜನ ನೆಲದ ಮೇಲಿನ ಪ್ರೀತಿಯಿಂದ ಅರಣ್ಯದ ಅಂಚಿನಲ್ಲಿ ಅನೇಕ ಕಡೆ ''ಬಗರ್ ಹುಕುಂ'' ವ್ಯವಸಾಯ ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಅನೇಕ ತಲೆಮಾರುಗಳಿಂದ ಇದ್ದಾರೆ. ಅವರ ಅಕ್ರಮಣದ ಅನೇಕ ವರ್ಷಗಳ ಬಳಿಕ ಆ ಭೂಮಿ ಅರಣ್ಯ ಭೂಮಿ ಆಗಿ ಪರಿವರ್ತಿತವಾಗಿದೆ. ಅನಾಗರೀಕರಾದ ಅವಿದ್ಯಾವಂತರಾದ ಭೂರಹಿತ ಆದಿವಾಸಿಗಳು ಮತ್ತು ಇನ್ನಿತರ ಬಡವರು ತಾವು ನಂಬಿನೆಚ್ಚಿದ, ಬದುಕನ್ನೆಲ್ಲ ಧಾರೆ ಎರೆದ ತುಂಡು ಭೂಮಿಯನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಮಧ್ಯಪ್ರದೇಶ ಸರ್ಕಾರ ಇತ್ತೀಚೆಗೆ ಒಂದು ಲಕ್ಷ ಗಿರಿಜನ ಕುಟುಂಬಗಳಿಗೆ ಒಂದು ಲಕ್ಷ ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಪಟ್ಟಾ ದೊರಕಿಸಿಕೊಟ್ಟಿತು. ಅಂತಹದೇ ಸ್ಥಿತಿ ಕರ್ನಾಟಕದಲ್ಲಿದೆ. ಮಧ್ಯಪ್ರದೇಶದ ಮಾಧರಿ ಅನುಸರಿಸಿ, ಕರ್ನಾಟಕದಲ್ಲಿ ಸಹ ಆದರಲ್ಲೂ ಕೊಡಗಿನಲ್ಲಿ ಬಡಗಿರಿಜನರಿಗೆ, ಅರ್ಹ ಭೂರಹಿತ ಬಡವರಿಗೆ ಅರಣ್ಯದಲ್ಲಿ ಹಿಂದಿನಿಂದ ವ್ಯವಸಾಯ ಮಾಡುತ್ತಿದ್ದಲ್ಲಿ ಪಟ್ಟಾ ದೊರಕಿಸಿಕೊಡಬೇಕಾಗಿ ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :– ಮಾನ್ಯ ಉಪಾಧ್ಯಕ್ಷೆಣೀಯವರೇ, ಇದಕ್ಕೆ ಸಮಯ ಬೇಕಾಗಿದೆ.

ಉಪಾಧ್ಯಕ್ಷರು :– ಅವರಿಗೆ ಉತ್ತರ ತರಿಸಿಕೊಡಿ.

ಶ್ರೀ ಇ.ಟಿ. ಶಂಭುನಾಥ್ :– ಉತ್ತರ ತರಿಸಿಕೊಡಲಾಗುವುದು.

(ಶ್ರೀ ಆರ್.ಎನ್. ನಾಯಕ್ :– ಸದಸ್ಯರು ಹಾಜರಿರಲಿಲ್ಲ)